**ದಿನಾಂಕ : 17–11–2022 ರಂದು ಸಾಕ್ಷಿಗೆ ಪ್ರಮಾಣವಚನ ಬೋದಿಸಲಾಯಿತು**

---

**ಪಾಟೀ ಸವಾಲು ಶ್ರೀ.ಎಮ್.ಆರ್. ವಕೀಲರಿಂದ:–**

ನನಗೆ ವಾದಿಯ ಪರಿಚಯ ಇರುತ್ತದೆ. ನಮ್ಮ ಊರಿನವನು. 1 ನೇ ಪ್ರತಿವಾದಿ ವಾದಿಯ ತಂದೆ. ವಾದಿಯು ತನ್ನ ಭೂಮಿಗಾಗಿ ಪ್ರತಿವಾದಿಯರ ವಿರುದ್ದ ದಾವೆಯನ್ನು ಹಾಕಿರುತ್ತಾನೆ. ವಾದಿ ಮತ್ತು 1 ನೇ ಪ್ರತಿವಾದಿ ಕೂಡಿಯೇ ಜೀವನ ನಡೆಸುತ್ತಿದ್ದಾರೆ. 1 ನೇ ಪ್ರತಿವಾದಿ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಅಂತಾ ದಾವೆ ಹೂಡಿರುತ್ತಾನೆ. ಸರ್ವೇ ನಂ.72,73 ಹಾಗೂ ಇತರೆ ಹೊಲಗಳ ಬಗ್ಗೆ ದಾವೆ ಹೂಡಿದ್ದು 1 ನೇ ಪ್ರತಿವಾದಿಯು ವಾದಿಗೆ ಕೇಳದೇ ಆಸ್ತಿಯನ್ನು ಮಾಡಿರುತ್ತಾನೆ ಅಂತಾ ದಾವೆ ಹಾಕಿರುತ್ತಾನೆ.

2. ವಾದಿಯು ನನ್ನನ್ನು ಕೇಳಿ ವ್ಯವಹಾರ ಮಾಡುವುದಿಲ್ಲ. 1995 ರಲ್ಲಿ ವಾದಿ ಮತ್ತು ಅವನ ತಾಯಿ ಸೇರಿಕೊಂಡು ದಾವೆ ಹೂಡಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ಆಗ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದಕ್ಕಾಗಿ ದಾವೆ ಹೂಡಿರುತ್ತಾರೆ. ಆ ದಾವೆಯ ಏನು ಆಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಗೆ ಮಾಹಿತಿ ನಾನೇ ನೀಡಿರುತ್ತೇನೆ. 1 ಮತ್ತು 4 ನೇ ಪ್ರತಿವಾದಿಯ ವ್ಯವಹಾರದ ಸಮಯದಲ್ಲಿ ನಾನು ಹೋಗಿರುವುದಿಲ್ಲ. ನಿಪಿ-10 ರ ಸಾಕ್ಷಿದಾರರಿಗೂ ವಾದಿಗೂ ಯಾವುದೇ ವೈಮನಸ್ಸು ಇರುವುದಿಲ್ಲ. ದಾವಾ ಆಸ್ತಿಗಳ ದಾಖಲೆಗಳನ್ನು ನೋಡಿರುತ್ತೇನೆ.

3. ಮೋಸ ತನದಿಂದ 1 ನೇ ಪ್ರತಿವಾದಿಯು 4 ನೇ ಪ್ರತಿವಾದಿಗೆ ಆಸ್ತಿ ಮಾರಾಟ ಮಾಡಿದ್ದಕ್ಕಾಗಿಯೇ ದಾವೆಯನ್ನು ಹಾಕಿರುತ್ತಾನೆ. ಸದರಿ ಪ್ರಕರಣದಲ್ಲಿ ನನಗ ಏನೂ ಮಾಹಿತಿ ಇರುವುದಿಲ್ಲ, ವಾದಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರ ಸರಿಯಲ್ಲ. 4 ನೇ ಪ್ರತಿವಾದಿ ಆಸ್ತಿಯನ್ನು ನ್ಯಾಯಾವಾಗಿಯೇ ಖರೀದಿ ಮಾಡಿರುವ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಮಾರಾಟ ಮಾಡಿರುವ ಆಸ್ತಿಗಳನ್ನು ವಾದಿಯೇ ಬಿತ್ತುವುದು, ಬೆಳೆಯುವುದು ಮಾಡುತ್ತಾನೆ ಎನ್ನುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ.ಕೇ. ಸರಿ ಇದೆ

**ಸಹಿ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು.,ಲಿಂಗಸುಗೂರು